ಓಎಸ್. 159/2022

ಡಿ. ಡಬ್ಲ್ಯೂನಂ. - 2

<u>ದಿನಾಂಕಃ 09.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

**<u>ಮುಖ್ಯ ವಿಚಾರಣೆ : ಪ್ರತಿವಾದಿ 1 ರಿಂದ 3 ರವರ ಪರ ಸಹಾಯ ಸರ್ಕಾರಿ ವಕೀಲರಿಂದಃ–</u>**

ನಾನು ದಿನಾಂಕ 30.05.2026 ರಂದು 1ನೇ ಪ್ರತಿವಾದ ಕಚೇರಿಯಲ್ಲಿ ತಹಶೀಲ್ದಾರ್ ಎಂದು ಪ್ರಭಾರ ವಹಿಸಿಕೊಂಡಿದ್ದು, 1ನೇ ಪ್ರತಿವಾದಿಯ ಪರವಾಗಿ ನಾನು ಈ ದಾವೆಯಲ್ಲಿ ಪ್ರತಿನಿಧಿಸುತ್ತಿದ್ದೇನೆ. ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿ ನನ್ನ ವಕೀಲರ ಮುಖಾಂತರ ಬರೆಸಿರುತ್ತೇನೆ ಹಾಗೂ ನನ್ನ ಸಹಿಯನ್ನು ಪ್ರಮಾಣ ಪತ್ರಕ್ಕೆ ಹಾಕಿರುತ್ತೇನೆ.

ದಿನಾಂಕ 27.04.2026 ರಂದು ಡಿಡಬ್ಲ್ಯೂ–1 ರವರು ಹಾಜರು ಪಡಿಸಿರುವ ನಿಶಾನೆಗಳನ್ನು ಅಂತೆಯೇ ಅಳವಡಿಸಿಕೊಳ್ಳಲು ಕೋರುತ್ತೇನೆ.

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.